ಹೇಳುತ್ತಿದ್ದಾರೆ. ಈಗ ಎರಡೂವರೆ ಲಕ್ಷ ರೂಪಾಯಿ ಹೆಚ್ಚು ಖರ್ಚಾಗಿರುವುದಕ್ಕೆ ಪುರಸಭೆಯವರಿಂದ ಅಪ್ರೂವಲ್ ತೆಗೆದುಕೊಂಡಿಲ್ಲ, ಜನಗಳಿಂದ ಅಪ್ರೂವಲ್ ತೆಗೆದುಕೊಂಡಿಲ್ಲ. ಏತಕ್ಕೆ ಹೆಚ್ಚು ಹಣ ಖರ್ಚಾಯಿತು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಮೊದಲು ೫ ಲಕ್ಷ ಸಾಂಕ್ಷನ್ ಆಯಿತು. ಈಗ ಎರಡೂವರೆ ಲಕ್ಷ ರೂಪಾಯಿ ಜಾಸ್ತಿಯಾಗಿದೆ ಅಂದರೆ, ಇದರ ಬಗ್ಗೆ ಯಾರನ್ನೂ ಕೇಳಬೇಕಾಗಿಲ್ಲ. ಇದರ ಬಗ್ಗೆ ಈಗಾಗಲೆ ಬೇಕಾದಷ್ಟು ಕಾರಣಗಳನ್ನು ಹೇಳಿದ್ದೇನೆ. ಈಗ ಏಳೂವರೆ ಲಕ್ಷ ರೂಪಾಯಿ ಖರ್ಚು ಆಗಿದ್ದರೂ ನೀರಿನ ಅಭಾವ ಇದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಇನ್ನು ಒಂದು ತಿಂಗಳೊಳಗಾಗಿ ಕೆಲಸ ಪೂರೈಸಿ ನೀರನ್ನು ಒದಗಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಂ. ಗಂಗಣ್ಣ ಭೀವಪ್ಪ.—ಸ್ವಾಮಿ, ಇದು ನನ್ನ ಸ್ವಂತ ಗ್ರಾಮ, ನಾನು ಊರಿನಲ್ಲಿ ಹೋದರೆ ಜನರು ನನ್ನನ್ನು ಸುಮ್ಮನೆ ಬಿಡುವುದಿಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರು ಗತಕಾಲದ ವೈಭವ ವಿಜಯನಗರ ಸಾಮ್ರಾಜ್ಯವನ್ನು ನೆನಸಿಕೊಳ್ಳುತ್ತಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ, ನೀವು ಅವರಿಗೆ ಅನುಕೂಲ ಮಾಡಿಕೊಡುವವರೆಗೂ ಅವರು ಅವರ ಊರಿಗೆ ಹೋಗುವ ಆಗಿಲ್ಲ. ಆದ್ದರಿಂದ ಮಾನ್ಯ ಸದಸ್ಯರನ್ನು ತಮ್ಮ ಮನೆಯಲ್ಲಿ ಇಟ್ಟು ಕೊಳ್ಳಿ. ತಾವು ನೀರಿನ ವ್ಯವಸ್ಥೆ ಸರಿಪಡಿಸುವವರೆಗೂ ಅವರು ಊರಿಗೆ ಹೋಗುವಂತಿಲ್ಲ.

ಶ್ರೀ ಎಂ.ಗಂಗಣ್ಣ ಭೀವಪ್ಪ.—ಸ್ವಾಮಿ, ಇನ್ನು ಅಲ್ಲಿಗೆ ಪಂಪ್‌ಸೆಟ್ಟು ಬಂದಿಲ್ಲ.

MR. SPEAKER.—The Hon'ble Minister will give direction don't worry.

(ii) Re. Unduer delay in extinguishing five at Gadag.

ಶ್ರೀ ಎಂ.ಜಿ. ಜರತಾರಗರ್.—ಸ್ವಾಮಿ, ಗದಗಿನ ಜವಳಿ ಬಡಾವಣೆಯ ಕಿರಾಣಿ ಅಂಗಡಿಯೊಂದರಲ್ಲಿ ಸಂಭವಿಸಿದ ಬೆಂಕಿಯನ್ನು ಆರಿಸುವಲ್ಲಿ ಅಗ್ನಿಶಾಮಕ ದಳದವರ ಅತಿ ವಿಳಂಬದಿಂದಾಗಿ ಉದ್ಭವಿಸಿದ ಪರಿಸ್ಥಿತಿಯ ವಿಚಾರದ ಬಗ್ಗೆ ಮಾನ್ಯ ಪೌರಾಡಳಿತ ಸಚಿವರ ಗಮನವನ್ನು ಸೆಳೆಯುತ್ತೇನೆ.

SRI H.C. SRIKANTAIAH (Minister for Municipal Administration)—I wish to make the following statement:

On 30-11-1978, (midnight) a fire accident took place at Javal area, of Gadag in which a shop belonging to one Shri Salunke was affected by the fire. On receipt of a phone call, the fire fighter belonging to Gadag-Betgeri Municipality was sent with the staff to the spot to control the fire. The fire brigade unit brought the fire under control.

Since the fire was promptly brought under control by the Municiple Fire Fighters the news item that the Municipality took action after the fire was extinguished is far from the truth and base less.

ಶ್ರೀ ಎಂ.ಜಿ. ಜರತಾರಗರ್.—ಸ್ವಾಮಿ, ತಮ್ಮ ಉತ್ತರದಲ್ಲಿ ನೀರು ಸರಬರಾಜು ಮಾಡಿದಾರೆಂದು ಹೇಳಿದ್ದೀರಿ. ಅಲ್ಲಿ ಫೈರ್‌ಬ್ರಿಗೇಡ್ ಯಾವ ರೀತಿಯಿಂದಲೂ ಕೆಲಸ ಮಾಡಿಲ್ಲ. ಅಲ್ಲಿ ಸತ್ಯಕ್ಕೆ ದೂರವಾಗಿ ಹೇಳುತ್ತಿದ್ದಾರೆ. ರಾತ್ರಿ ೧೨ ಗಂಟೆಯ ನಂತರ ಯಾವುದೇ ರೀತಿಯಿಂದ ಅಗ್ನಿಶಾಮಕ ದಳದವರು ಕೆಲಸ ಮಾಡಿಲ್ಲ. ಅಲ್ಲಿ ಮೂರು ವಾಹನಗಳು ಇದ್ದು, ಅದರಲ್ಲಿ ಎರಡು ಕೆಟ್ಟಿದ್ದು ಒಂದು ವಾಹನ ಬಂದಿದೆ, ಆದರೆ ಅಲ್ಲಿಗೆ ಬಂದಿದ್ದಂತಹ ವಾಹನದಲ್ಲಿ ನೀರು ಇರಲಿಲ್ಲ ಎಂದು ಜನರು ಬೇಜಾರು ಮಾಡಿಕೊಂಡಿದ್ದಾರೆ. ಅಲ್ಲಿ ಬಡ ಜನರ ಮನೆಗಳು ಸುಟ್ಟಿವೆ. ಅಗ್ನಿಶಾಮಕ ದಳದವರಂ ಅಲ್ಲಿ ಸರಿಯಾಗಿ ಕೆಲಸ ಮಾಡಿಲ್ಲ. ಆದುದರಿಂದ ಇನ್ನು ಮುಂದೆ ಸರಿಯಾಗಿ ನೋಡಿಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಬೆಂಕಿ ಅನಾಹುತವಾದಾಗ ಮುನಿಸಿಪಾಲಿಟಿಯ ಫೈರ್‌ಬ್ರಿಗೇಡ್ ನವರು ಹೆಚ್ಚು ನಿಗಾವಹಿಸುವಂತೆ ನಾನು ಏರ್ಪಾಡು ಮಾಡುತ್ತೇನೆ.

(*ii*) *re. Irregularities in the K.S.F.A. Bangalore.*

10.00 A.M.

MR. SPEAKER.—Next Sri T.R. Shamanna to call the attention of the Hon.Minister of State for Information and Youth Services to the alleged irregularities and misuse of funds in Karnataka State Foot ball Association, Bangalore,

SRI K.H. SRINIVAS (Minister of State for Youth Services and Information).—I have a submission to make. Unfortunately, I had no knowledge of this notice because the Education Commissioner on account of some confusion on his part had directed it to the Education Minister and I don't have the relevant file I only got an extreneous note from the Directorate of Youth Services, which I am not prepared to read So, I suggest that this may be treated as 312 and if the hon.Member Sri T.R. Shamanna raises some points, I will try te reply to him extempo on the basis of certain facts which are on hand. I am not able to read the prepared statement.

ಅಧ್ಯಕ್ಷರು .—ಕ್ರೀಡೆಗೆ ಸಂಬಂಧಪಟ್ಟಿದ್ದಲ್ಲವೆ ನಿಮ್ಮ ಖಾತೆ?

SRI K.H. SRINIVAS.—I have all along been incharge of Sports but because the Education Commissioner thought for reasons best known to him that it belongs to somebody else, he has not sent the notice to me. There is some confusion.

ಶ್ರೀ ಸಿ.ಎಂ. ಇಬ್ರಾಹಿಂ.—ಶಿಕ್ಷಣ ಕಮಿಷನರ್ ಅವರಿಗೆ ಕ್ರೀಡಾ ಖಾತೆ ಯಾರಿಗೆ ಬರುತ್ತದೆ, ಶಿಕ್ಷಣ ಖಾತೆ ಯಾರಿಗೆ ಬರುತ್ತದೆನ್ನುವ ಅರಿವು ಇಲ್ಲದಿದ್ದ ಮೇಲೆ ಅವರು ಏತಕ್ಕೆ ಆ ಹುದ್ದೆಯಲ್ಲಿ ಮುಂದುವರಿಯಬೇಕು? ಮಂತ್ರಿಗಳು ಈ ರೀತಿ ಮಾಡಿದರೆ ಪರವಾಗಿಲ್ಲ. ಆದರೆ, ಒಬ್ಬ ಐ.ಎ.ಎಸ್. ಅಧಿಕಾರಿ, ಹೀಗೆ ಮಾಡುವುದೆ? ಇದನ್ನು ನೋಡಿದರೆ ಸೆಕ್ರೆಟೇರಿಯೆಟ್ ಮಟ್ಟದಲ್ಲಿ ಆಡಳಿತ ಎಷ್ಟು ಸ್ವಾರಸ್ಯವಾಗಿ ನಡೆಯುತ್ತಿದೆ ಎನ್ನುವುದು ಗೊತ್ತಾಗುತ್ತದೆ. He is an I.A.S. Officer. ಈತನ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅವರು ಮಾಡಿರುವುದು ಮಹಾ ತಪ್ಪು. You must take action against that Commissioner. He is a full paid Officer. He is an I.A S. Officer. If he has done a mistake, action should be taken against him.

SRI T.R. SHAMANNA.—I am anxious to get relief. I will give a notice under rule 312 and I request the Chair to take it up on Monday

MR SPEAKER.—The hon.Member may raise this matter. The hon.Member can say what he intends to say.

SRI T.R. SHAMANNA.—The Hon.Minister wanted to get some more information. If he is prepared to answer to my questions, I have no objection to raise this matter.